ಮಹಿಳಾ ಪಾತ್ರಗಳು ಇಂಥ ಸಂಗತಿಗಳ ಜೊತೆಯೇ ನಡೆಯುತ್ತವೆ; ಗುದ್ದಾಡುತ್ತವೆ. ತನ್ನೆದುರಿಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡಕಲೆತ್ನಿಸುತ್ತವೆ. ಅವು ಆಯ್ಕೆ ಮಾದರಿಯ ಉತ್ತರದಂತಲ್ಲ. 'ಒಬ್ರು ಸುದ್ದ್ಯಾಕೆ ಒಬ್ರು ಗದ್ಲ್ಯಾಕೆ' ಕಥೆಯ ಕಲ್ಯಾಣಿ, 'ನೆರೆಹಾವಳಿ'ಯ ಅನಿತ, 'ದೇವರ್ ಬಂದಾವ್ ಬನ್ನಿರೋ' ಕಥೆಯ ಚಿಕ್ಕಮ್ಮ, 'ವಿಮುಖ' ಕಥೆಯ ಮೈತ್ರ, 'ಬದುಕೂ ಒಂದು ಕಲೆ'ಯ ಲಕ್ಷ್ಮೀ, ಮುಂತಾದ ಪಾತ್ರಗಳು ಸಮಾಜದ ಕಟ್ಟುಪಾಡುಗಳನ್ನು ಮುರಿಯಲೆತ್ನಿಸುತ್ತವೆ. ಗಂಡನಿಂದ ನಿರಾಕರಣೆಗೊಳಗಾದ, ಹೆಂಡತಿ ಬದುಕಿದ್ದರೂ ಮತ್ತೊಂದು ಮದುವೆಯಾಗುವ, ಪ್ರಿಯಕರನೇ ತನ್ನ ಭಾವಿಪತ್ನಿಯನ್ನು (ಅವಳಿಗೆ ತಿಳಿಯದಂತೆ) ಗೆಳೆಯನಿಗೆ ಕೂಡಲು ವಾತಾವರಣ ನಿರ್ಮಿಸುವ, ದೇವರ ಹೆಸರಲ್ಲಿ ಬಸವಿಯಾಗಿಸಲು ಯತ್ನಿಸುವ, ತಂದೆ-ಮಗ ಇಬ್ಬರೂ ಒಂದೇ ಹೆಣ್ಣನ್ನು ಅನುಭವಿಸಲು ಹಂಬಲಿಸುವ... ಇಂತಹ ಅನೇಕ ಘಟನೆಗಳು ಕಥೆಯಲ್ಲಿ ಮಹಿಳಾದೃಷ್ಟಿಕೋನವನ್ನು ಪ್ರಶ್ನಿಸುತ್ತವೆ. 'ಹೆಣ್ಣು ಗೆದ್ದದ್ದು ಲೆಕ್ಕಕ್ಕಿಲ್ಲ', 'ನಾನು ಕರ್‍ದಂಗೆಲ್ಲಾ ಬಂದು ನನ್ಜತೆ ಮಕ್ಕಂತೀಯಾ ಶಾಲೆಗೆ ಸೇರುಸ್ತೀನಿ'. 'ಮದ್ವೆ ಆಗದೊಂದೆ ಉದ್ದೇಶ ಏನ್ಸಾರ್ ಜೀವ್ನಕ್ಕೆ...?', 'ನೀನು ಗೆದ್ದುದ್ದೇನು ಲೆಕ್ಕುಕ್ಕಿಲ್ಲವ್ವೋಗೆ...' ಇಂಥ ಅನೇಕ ಮಾತುಗಳು ಸಂಕಲನದುದ್ದಕ್ಕೂ ಹಾಸಿಕೊಂಡಿವೆ. ಇಂಥ ಮಹಿಳಾ ಪ್ರಶ್ನೆಗಳು ಸಂಪ್ರದಾಯ ಸಮಾಜವನ್ನು ನಿತ್ರಾಣವಾಗಿಸುತ್ತವೆ. ಹಾಗೆಯೇ ಮಹಿಳೆ ಕಟ್ಟಿಕೊಳ್ಳುವ ಲೋಕ ಬೇರೆಯೇ ಇದೆ ಎಂಬುದನ್ನು ಸೂಚ್ಯವಾಗಿ ದರ್ಶನಮಾಡಿಸುತ್ತವೆ.

ಈ ಸಂಕಲನದ ಕಥೆಗಳಲ್ಲಿ ಮುಖ್ಯವಾಗಿ ಕಾಣುವ ಮತ್ತೊಂದು ಅಂಶ – ಹೆಣ್ಣಿನ ಭಾವುಕತೆ ಮತ್ತು ಗಂಡಿನ ವ್ಯವಹಾರಿಕತೆಗಳು ಸದಾ ಡಿಕ್ಕಿ ಹೊಡೆಯುತ್ತಿರುವುದು. ಆದರೆ ಅದು ಅತಿರೇಕದ ಸಂಘರ್ಷದ ರೂಪದಲ್ಲಿಲ್ಲ. ಬದುಕಿನ ವರ್ತಮಾನದೊಳಗೆ ಸಹಜವಾಗಿ ಜರುಗುವ ಕ್ರಿಯೆಯಂತೆ ನಡೆಯುತ್ತಿರುತ್ತದೆ. ಆ ಕಾರಣದಿಂದ ಆರಂಭದ ಮಹಿಳಾಚಿಂತನೆಯ ಪ್ರಶ್ನೆಗಳನ್ನು ಇವರ ಕಥೆಗಳು ಸೂಕ್ಷ್ಮವಾಗಿ ಎದುರಾಗುತ್ತವೆ. ಮಹಿಳೆಯ ಎಲ್ಲ ದಮನಕ್ಕೂ ಪುರುಷನೇ ಕಾರಣ ಎಂಬ ನಿಲುವನ್ನು ಒಪ್ಪಿಕೊಂಡಂತೆ ಆರಂಭವಾಗುತ್ತವೆ. ತನ್ನ ತಾಯಿಯನ್ನು ನರಳಿಸಿದ ತಂದೆ ಕೊನೆಗಾಲದಲ್ಲಿ ನರಳಲಿ ಎಂದು ಬಯಸುವ, ತಂದೆಯ ಕಾಲು ಕಡಿಯುವಾಗ ಸಂತುಷ್ಟಳಾಗುವ, 'ನನ್ನ ಗರ್ಭದಿಂದ ಗಂಡು ಮಾತ್ರ ಹುಟ್ಟುವುದು ಬೇಡ' ಎಂದು ವಿರೋಧಿಸುವ ನೆಲೆಯಿದೆ. ಆದರೆ ಅಲ್ಲಿಗೆ ಕೊನೆಗೊಳ್ಳದೆ ಅವಳಿಗೆ ಗಂಡುಮಗು ಹುಟ್ಟಿ 'ಅದು ಬೊಚ್ಚು ಬಾಯಗಲಿಸಿ ನಕ್ಕಾಗ ಅವಳ ಕಣ್ಣಂಚಿನಲ್ಲಿದ್ದ ನೀರು ಫಳಕ್ಕನೆ ಕೆಳಗುರುಳಿತು' ಎಂದು ಮಾನವೀಯಗೊಳ್ಳುತ್ತದೆ. ಅಷ್ಟರಮಟ್ಟಿಗೆ ಇಲ್ಲಿನ ಹೆಣ್ಣುಗಳು ಮಾನವೀಯ ಮಹತ್ವಕಾಂಕ್ಷೆಯುಳ್ಳವರು. ಆರಂಭದಲ್ಲಿ ಫೆಮಿನಿಸಂನ ರಾ ಮೆಟೀರಿಯಲ್‌ನಂತೆ ಕಾಣುತ್ತಲೇ ತಾಯ್ತನದ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ಹಾಗಾದರೆ ನಾವು ಮುಟ್ಟಬೇಕಾಗಿರುವುದು ಏನು? ದಾಟಬೇಕಾಗಿರುವುದು ಏನನ್ನು? ಎಂಬ ತಾತ್ವಿಕ ಪ್ರಶ್ನೆಗಳನ್ನು ಕಥೆಗಳು ನಮ್ಮ ಮುಂದಿಡುತ್ತದೆ.

ಆಕ್ರೋಶ, ರಭಸಗಳು ತೀವ್ರವಾಗಿದ್ದ ಕಾಲದಲ್ಲಿ ಪ್ರತಿಭಟನೆ, ಪ್ರತಿರೋಧಗಳು ವಾಚ್ಯವಾಗಿಯೇ ಕಾಣಬೇಕು ಎಂಬ ಹೊತ್ತಿನಲ್ಲಿ ಬರಹಕ್ಕೆ ತೊಡಗಿಕೊಂಡ ಜಾಹ್ನವಿ ಅವರು ದಲಿತನೆಲೆಯನ್ನು ಎದುರುಗೊಳ್ಳುವ ಬಗೆಯೂ ವಿಶಿಷ್ಟವಾದುದು. ತಮ್ಮ ಕಥೆಗಳಲ್ಲಿ ತೀರಾ ವಾಚ್ಯವೆನಿಸುವ ಪ್ರತಿಭಟನೆಯನ್ನು ತೋರದೆ ಒಳಗುದಿಯನ್ನು ಓದುಗರೆದೆಯೊಳಗೆ ಇಳಿಸುತ್ತಾರೆ. ಅವರ ನಿರೂಪಣಾ ತಂತ್ರವೇ ಅದಕ್ಕೆ ಹೇಳಿಮಾಡಿಸಿದಂತಿದೆ. 'ಕಳ್ಳುಬಳ್ಳಿ' ಕಥೆ ಇಂಥ ನಿಲುವುಳ್ಳ ಕಥನ ನಡಿಗೆಯ ರೂಪಕವಾಗಿಯೇ ಇದೆ. ಅವರ ಸಂಕಲನದ ಬಹುಪಾಲು ಕಥೆಗಳ ಆಶಯವೂ ಇದೇ ಆಗಿದೆ.

ದಲಿತ ಸಾಹಿತ್ಯದ ವಸ್ತುನಿಷ್ಠ ಮತ್ತು ನಿಷ್ಠುರ ವಿಮರ್ಶೆಯಂತೆ 'ಕಳ್ಳುಬಳ್ಳಿ'ಯಿದೆ. ಈ ಕಥೆ ಅಲ್ಲಲ್ಲಿ ಚರ್ಚೆಯಾಗಿದೆ. ಜಾತಿಯೊಳಗಿನ ಶ್ರೇಷ್ಠತೆಯ ವ್ಯಸನವನ್ನು ಪ್ರಶ್ನಿಸುತ್ತಲೇ, ಜಾತಿಯೊಳಗೇ ನಡೆಯುವ ಶೋಷಣೆಯನ್ನು ಈ ಕಥೆ ಚರ್ಚಿಸುತ್ತದೆ. ಇಂತಹ ಪ್ರಶ್ನೆಗಳನ್ನು 'ಕನಸು', 'ಹೋರಾಟ' ಕಥೆಗಳೂ ಎತ್ತಿಕೊಳ್ಳುತ್ತವೆ. ದಮನಿತರೆಲ್ಲರನ್ನು ಒಳಗೊಂಡ ದಲಿತ ಚಳವಳಿ ಒಂದು ಕಡೆ ನಡೆಯುತ್ತಿದ್ದರೆ, ತನ್ನದೇ ಜಾತಿಯೊಳಗೆ ತನ್ನದೇ ಜಾತಿಯವರನ್ನು ನಡೆಸಿಕೊಳ್ಳುವ ಬಗೆಯನ್ನು ಈ ಕಥೆ ಸೂಕ್ಷ್ಮವಾಗಿ ಎದುರುಗೊಳ್ಳುತ್ತದೆ. ಅಣ್ಣಯ್ಯ, ದೇವರಾಜ ಪಾತ್ರಗಳು ಪ್ರತಿನಿಧಿಯಾಗಿ